**ದಿನಾಂಕ : 12-03-2018 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಶ್ರೀ ಬಿ ಎಸ್ ಸಿ ವಕೀಲರಿಂದ :**

ಈ ಹಿಂದೆ ಸಿವಿಲ್ ಕೋರ್ಟನಲ್ಲಿ ಮಾಲತೇಶ ನನ್ನ ವಿರುದ್ಧ ದಾವೆ ಹೂಡಿದ್ದನು ಅಂದರೆ ಸರಿ. ಸದರಿ ದಾವೆಯಲ್ಲಿ ನಾನು ಮತ್ತು ನನ್ನ ಸಹೋದರ ಸಹೋದರಿಯರು ಪ್ರತಿವಾದಿಯರು ಇದ್ದೆವು ಅಂದರೆ ಸರಿಯಲ್ಲ. ಸಾಕ್ಷಿ ಸ್ವ ಇಚ್ಚೆಯಿಂದ ಅದರಲ್ಲಿ ತಾವು ವಾದಿಯರು ಇದ್ದರು ಎಂದು ಹೇಳಿರುತ್ತಾರೆ. ಆ ದಾವೆ ವಜಾ ಆಗಿರುತ್ತದೆ ಅಂದರೆ ಸರಿ. ಸಾಕ್ಷಿ ಸ್ವ ಇಚ್ಚೆಯಿಂದ ತಪ್ಪು ಹೆಸರಿನ ವ್ಯಕ್ತಿಗಳ ಹೆಸರಿನಲ್ಲಿ ದಾವೆ ಆಗಿದ್ದರಿಂದ ಮಾಲತೇಶ ದಾವೆ ವಾಪಸ್ಸು ಪಡೆದಿದ್ದಾನೆಂದು, ಹಾಗೂ ತಾವು ಅದರಲ್ಲಿ ಮುಂದುವರೆಯಲು ಕೇಳಿಕೊಂಡಿದ್ದರೆಂದು ಹೇಳಿರುತ್ತಾರೆ. ಆ ಸಿವಿಲ್ ಕೋರ್ಟನ ದಾವೆಯಲ್ಲಿ ನನ್ನ ಮೇಲೆ ಸಮನ್ಸ ಜಾರಿ ಆಗಿರುತ್ತದೆ ಅಂದರೆ ಸರಿಯಲ್ಲ. ನನ್ನ ಸಹೋದರ ಸಹೋದರಿಯರ ಮೇಲೂ ಆ ಕೋರ್ಟನ ನೋಟೀಸು ಜಾರಿ ಆಗಿಲ್ಲ. ಮಾಲತೇಶ ಆ ದಾವೆ ಯಾವ ವಕೀಲರಿಗೆ ಕೊಟ್ಟಿದ್ದ ನನಗೆ ಗೊತ್ತಿಲ್ಲ. ಮಾಲತೇಶ ಯಾವ ವಕೀಲರಿಗೆ ಆ ಕೋರ್ಟನ ದಾವೆ ನಡೆಸಲು ಕೇಸು ಕೊಟ್ಟಿದ್ದನೋ ಅದೇ ವಕೀಲರಿಗೆ ನಾವೂ ಸಹ ಅರ್ಜಿ ಹಾಕಲು ಕೇಳಿಕೊಂಡಿರುತ್ತೇವೆ ಅಂದರೆ ಸರಿಯಲ್ಲ. ನಾವು ಆ ಕೋರ್ಟನ ದಾವೆಯಲ್ಲಿ ಅರ್ಜಿ ಹಾಕಲು ಯಾವ ವಕೀಲರಿಗೆ ಕೇಸು ಕೊಟ್ಟಿದ್ದೆವು ನನಗೆ ಗೊತ್ತಿಲ್ಲ. ನಾವು **2008** ರಲ್ಲಿ ಆ ಕೇಸಿನಲ್ಲಿ ಅರ್ಜಿ ಹಾಕಲು ವಕೀಲರಿಗೆ ಕೇಸು ಕೊಟ್ಟಿದ್ದೆವು. ಮಾಲತೇಶ ಆ ಕೋರ್ಟನ ದಾವೆಯನ್ನು ಡಿ ಎಚ್ ಹುಣಸಿಮರದ ವಕೀಲರಿಗೆ ಕೊಟ್ಟಿದ್ದನು ಅಂದರೆ ಇರಬಹುದು. ನಾವೂ ಸಹ ಡಿ ಎಚ್ ಹುಣಸಿಮರದ ವಕೀಲರಿಗೆ ಅರ್ಜಿ ಹಾಕಲು ಕೇಸು ಕೊಟ್ಟಿದ್ದೆವು ಅಂದರೆ ಸುಳ್ಳು. ನಾವು ಆ ಕೋರ್ಟನ ದಾವೆಯಲ್ಲಿ ಕೇಸು ನಡೆಸಲು ವಕೀಲರಿಗೆ ವಕಾಲತ್ ಪತ್ರ ಕೊಟ್ಟಿರುತ್ತೇವೆಯೋ ಇಲ್ಲವೋ ನೆನಪು ಇಲ್ಲ. ನಾವು ಆ ಕೋರ್ಟನ ದಾವೆಯಲ್ಲಿ ಹಾಜರಾಗಿದ್ದರೂ ತಕರಾರು ನೀಡಿರುವುದಿಲ್ಲ ಅಂದರೆ ಸಾಕ್ಷಿ ಮಾಲತೇಶ ದಾವೆ ವಾಪಸ್ಸು ಪಡೆದಿದ್ದರಿಂದ ತಾವು ತಕರಾರು ಸಲ್ಲಿಸಿಲ್ಲ ಎಂದು ಹೇಳಿರುತ್ತಾರೆ.

ನಮ್ಮ ಘರಾಣೆಗೆ **3** ಹೊಲಗಳು, ಒಂದು ಮನೆ ಮತ್ತು ಒಂದು ಖುಲ್ಲಾ ಜಾಗೆ ಇರುತ್ತವೆ. ನಮ್ಮ ಹೊಲ ಒಟ್ಟು **16** ಎಕರೆ ಇರುತ್ತದೆ. ಆದರೆ ಯಾವ ಸರ್ವೆ ನಂಬರಿನ ಹೊಲ ಎಷ್ಟು ವಿಸ್ತೀರ್ಣ ಹೊಂದಿದೆ ಹೇಳಲು ಆಗುವುದಿಲ್ಲ. ಪ್ರತಿವಾದಿ ನಂ **1** ರಿಂದ **3** ಮಾತ್ರ ದಾವಾದ ಆಸ್ತಿಯ ಸಾಗುವಳಿ ಮಾಡುತ್ತಿದ್ದಾರೆ ಅಂದರೆ ಸುಳ್ಳು. ಸಾಕ್ಷಿ ತಾವೆಲ್ಲರೂ ಕೂಡಿ ಸಾಗುವಳಿ ಮಾಡುತ್ತಿದ್ದಾರೆಂದು ಹೇಳಿರುತ್ತಾರೆ. ಪಿತ್ರಾರ್ಜಿತ ಆಸ್ತಿಗಳು ಇರುತ್ತವೆಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿದ್ದೇವೆ. ನನ್ನ ಸಹೋದರ ಬಸವರಾಜ ದಿನಾಂಕ **21-04-2003** ರಂದು ಮರಣ ಹೊಂದಿದ್ದಾರೆ ಅಂದರೆ ಇರಬಹುದು. ನಮ್ಮ ತಂದೆ ಅಡಿವೆಪ್ಪ ದಿನಾಂಕ **09-09-2003** ರಂದು ಮರಣ ಹೊಂದಿದ್ದಾರೆ ಅಂದರೆ ಇರಬಹುದು. ನಮ್ಮ ತಂದೆ ಮರಣ ಹೊಂದುವ ಮುಂಚೆಯೇ ನಮ್ಮೆಲ್ಲರ ಮದುವೆಗಳು ಆಗಿದ್ದವು ಅಂದರೆ ಸರಿ. ನಮ್ಮ ತಂದೆ ಸತ್ತ ಬಳಿಕ ನಾಗಪ್ಪ, ಗಂಗಪ್ಪ ಮತ್ತು ಸುಜಾತಾ ಇವರ ಹೆಸರಿನಲ್ಲಿ ಖಾತೆ ಬದಲಾವಣೆ ಆಗಿರುತ್ತದೆ ಅಂದರೆ ಸರಿಯಲ್ಲ. ಈಗಲೂ ಸಹ ಖಾತೆ ಬದಲಾವಣೆ ನಮ್ಮ ತಂದೆಯ ಹೆಸರಿನಲ್ಲಿ ಇರುತ್ತವೆ. ನಮ್ಮ ತಂದೆ ಸತ್ತ ಬಳಿಕ ಡ ನಂ **140/3-4** ರ ಪ್ರಕಾರ ಜಮೀನುಗಳು ನಾಗಪ್ಪ, ಗಂಗಪ್ಪ ಮತ್ತು ಸುಜಾತಾ ಇವರ ಹೆಸರಿನಲ್ಲಿ ಹಕ್ಕು ಬದಲಾವಣೆ ಆಗಿರುತ್ತದೆ ಅಂದರೆ ಸುಳ್ಳು. ದಾವಾದ ಆಸ್ತಿಯ ಉತಾರೆಗಳನ್ನು ನಾನು ನೋಡಿರುವುದಿಲ್ಲ. ರಿ ಸ ನಂ **217** ಅ **/2** ನೇದ್ದರ **7** ಎಕರೆ **33** ಗುಂಟೆ ಮತ್ತು ರಿ ಸ ನಂ **218/1** ರ **1** ಎಕರೆ **9** ಗುಂಟೆ ಜಮೀನುಗಳನ್ನು ನಾಗಪ್ಪ ವೀರಭದ್ರಪ್ಪ ಬಸೆಟೆಪ್ಪ ಹಂಚಿನ ಇವರಿಗೆ ದಿ **19-06-2006** ರಂದು ಮಾರಾಟ ಮಾಡಿರುತ್ತಾರೆ ಅಂದರೆ ಸುಳ್ಳು. ಆ ಬಗ್ಗೆ ಖರೀದಿ ಪತ್ರ ನೋಂದು ಆಗಿರುತ್ತದೆ ಅಂದರೆ ಸಾಕ್ಷಿ ಅದು ಖೊಟ್ಟಿ ಖರೀದಿ ಪತ್ರ ಇರುತ್ತದೆ ಎಂದು ಹೇಳಿರುತ್ತಾರೆ. ಸದರಿ ರಿ ಸ ನಂ **217** ಅ **/2** ನೇದ್ದರ **7** ಎಕರೆ **33** ಗುಂಟೆ ಪೈಕಿ **2** ಎಕರೆ ಜಮೀನನ್ನು ನಾಗಪ್ಪ ಮತ್ತು ಗಂಗಪ್ಪನಿಂದ ಉಮೇಶಪ್ಪ ಬೆಟಗೇರಿ ಇವರು ಖರೀದಿ ಪತ್ರದ ಮೂಲಕ ಖರೀದಿಸಿದ್ದಾರೆ ಅಂದರೆ ಸರಿಯಲ್ಲ. ಅದೇ ರೀತಿ **7** ಎಕರೆ **33** ಗುಂಟೆ ಜಮೀನಿನ ಪೈಕಿ **2** ಎಕರೆ ಜಮೀನನ್ನು ವಿವೇಕಾನಂದಪ್ಪ ಬೆಟಗೇರಿ ಇವರಿಗೆ ಖರೀದಿ ಪತ್ರ ಮಾಡಿಕೊಟ್ಟಿರುತ್ತಾರೆ ಅಂದರೆ ಸುಳ್ಳು. ಸದರಿ ಖರೀದಿ ಪತ್ರಗಳ ಆಧಾರದಲ್ಲಿ ಖರೀದಿದಾರರ ಹೆಸರುಗಳು ಪಹಣಿ ಪತ್ರಿಕೆಗಳಲ್ಲಿ ನಮೂದು ಆಗಿರುತ್ತವೆ ಅಂದರೆ ಸರಿಯಲ್ಲ. ಅದೇ ರೀತಿ ರಿ ಸ ನಂ **29/2** ರ **3** ಎಕರೆ **3** ಗುಂಟೆ ಜಮೀನನ್ನು ಮೊಹಮ್ಮದ್‌ಮಿಯಾ ಅಬ್ದುಲ್ ರಜಾಕ ಅಜೀಜಮಿಯಾ ಇವರ ಹೆಸರಿನಲ್ಲಿ ಖರೀದಿ ಪತ್ರ ಮಾಡಿ ಕೊಟ್ಟಿರುತ್ತಾರೆ ಅಂದರೆ ಸರಿಯಲ್ಲ. ಸದರಿ ಮೊಹಮ್ಮದ್ ಮಿಯಾ

ಇವರು ತಾವು ಖರೀದಿಸಿದ ಆ ಆಸ್ತಿಯನ್ನು ಸೈಫುಲ್ಲಾ ಇಸ್ಮೈಲ್‌ಸಾಬ್ ಅತ್ತಾರ ಇವರಿಗೆ ಖರೀದಿ ಪತ್ರದ ಮೂಲಕ ಮಾರಿರುತ್ತಾರೆ ಅಂದರೆ ಸುಳ್ಳು. ಸದರಿ ಖರೀದಿ ಪತ್ರದ ಆಧಾರದಲ್ಲಿ ಸೈಫುಲ್ಲಾ ಇವರ ಹೆಸರು ಪಹಣಿ ಪತ್ರಿಕೆಯಲ್ಲಿ ನಮೂದು ಆಗಿರುತ್ತದೆ ಅಂದರೆ ಸುಳ್ಳು. ಅದೇ ರೀತಿ ಖರೀದಿ ಪತ್ರದ ಆಧಾರಗಳಲ್ಲಿ ಅವರೇ ದಾವಾದ ಆಸ್ತಿಗಳ ಸ್ವಾಧೀನ ಹೊಂದಿರುತ್ತಾರೆ ಅಂದರೆ ಸರಿಯಲ್ಲ. ನಾವು ಸೈಫುಲ್ಲಾ ಅತ್ತಾರ ಇವರಿಗೆ ದಾವೆಯಲ್ಲಿ ಸೇರಿಸಿರುವುದಿಲ್ಲ ಅಂದರೆ ಸರಿ. ರಿ ಸ ನಂ **217 ಅ /2** ನೇದ್ದರ ಪೈಕಿ **34** ಗುಂಟೆ ಜಮೀನನ್ನು ಸುರೇಶಗೌಡ ಬಸಲಿಂಗಪ್ಪಗೌಡ ಪಾಟೀಲ ಇವರಿಗೆ ಖರೀದಿ ಕೊಟ್ಟಿರುತ್ತಾರೆ ಅಂದರೆ ಸುಳ್ಳು. ಸದರಿ ಖರೀದಿ ಪತ್ರದ ಮೇರೆಗೆ ಅವರು ಅಲ್ಲಿ ಸ್ವಾಧೀನ ಹೊಂದಿರುತ್ತಾರೆ ಅಂದರೆ ಸರಿಯಲ್ಲ. ಸುರೇಶಗೌಡ ಪಾಟೀಲ ಇವರಿಗೆ ದಾವೆಯಲ್ಲಿ ಸೇರಿಸಿಲ್ಲ ಅಂದರೆ ಸರಿ. ನಾವು ಮತ್ತು ನಮ್ಮ ಎಲ್ಲ ಸಹೋದರ ಸಹೋದರಿಯರು **2004** ರಲ್ಲಿ ಅಪಸಾತ್ ವಾಟ್ನಿ ಮಾಡಿಕೊಂಡಿದ್ದೇವೆ ಅಂದರೆ ಸರಿಯಲ್ಲ. ಸದರಿ ವಾಟ್ನಿಯಲ್ಲಿ ನಮಗೆ ಬರಬೇಕಾದ ಹಿಸ್ಸೆಯನ್ನು ನಮಗೆ ಹಣದ ರೂಪದಲ್ಲಿ ನೀಡಿರುತ್ತಾರೆ ಅಂದರೆ ಸರಿಯಲ್ಲ. ನಮ್ಮ ಅಣ್ಣ ನಾಗಪ್ಪ ದಲಾಲಿ ಅಂಗಡಿ ಹೊಂದಿದ್ದರು ಅಂದರೆ ನನಗೆ ಮಾಹಿತಿ ಇಲ್ಲ. ಸದರಿ ದಲಾಲಿ ಅಂಗಡಿ ನಾಗಪ್ಪನ ಮಗ ಮಾಲತೇಶ ನಡೆಸುತ್ತಿದ್ದ ಅಂದರೆ ನನಗೆ ಗೊತ್ತಿಲ್ಲ. ದಲಾಲಿ ಅಂಗಡಿಯಲ್ಲಿ ನಷ್ಟ ಆಗಿದ್ದರಿಂದ ಸಾಲವನ್ನು ಮುಟ್ಟಿಸಲು ಮೇಲೆ ತಿಳಿಸಿದ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ ಅಂದರೆ ಸರಿಯಲ್ಲ. **3** ನೇ ಪ್ರತಿವಾದಿ ಗಂಗಪ್ಪ ಬ್ಯಾಡಗಿಯಲ್ಲಿ ಕಾಕೋಳ ರಸ್ತೆಗೆ ರಿ ಸ ನಂ **35** ರಲ್ಲಿ ಪ್ಲಾಟ್ ನಂ **41** ನ್ನು ಖರೀದಿ ಹಿಡಿದಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ಸದರಿ ಈ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಅಂದರೆ ಸರಿ. ನಮ್ಮ ತಂದೆಯ ಮರಣದ ಬಳಿಕ ನಾನಾಗಲಿ ನನ್ನ ಸಹೋದರಿಯರಾಗಲಿ ಎಂದೂ ದಾವಾದ ಆಸ್ತಿಯ ಸಾಮೂಹಿಕ ಕಬ್ಜೆ ಹೊಂದಿರುವುದಿಲ್ಲ ಅಂದರೆ ಸುಳ್ಳು. ನಮ್ಮ ತಂದೆ ಸತ್ತ ಬಳಿಕ ನಾವು ದಾವಾದ ಆಸ್ತಿಯಲ್ಲಿ ಸಾಮೂಹಿಕ ಸ್ವಾಧೀನ ಹೊಂದಿಲ್ಲ ಅಂದರೆ ಮತ್ತು ಅಂದಿನಿಂದ ನಾವು ಏಕತ್ರ ಘರಾಣೆಯಲ್ಲಿ ಮುಂದುವರೆದಿಲ್ಲ ಅಂದರೆ ಸುಳ್ಳು. ನಾನು ಮಾಲತೇಶ ಈತನ ಚಿತಾವಣೆಗೆ ಒಳಗಾಗಿ ಸುಜಾತಾ ಇವಳಿಗೆ ತೊಂದರೆ ಕೊಡಲು ಸುಳ್ಳು ದಾವೆ ಹಾಕಿರುತ್ತೇವೆ ಅಂದರೆ ಸರಿಯಲ್ಲ. ನಾವು ಎಂದೂ ದಾವಾದ ಆಸ್ತಿಯ ಕಬ್ಜಾದಲ್ಲಿ ಇರುವುದಿಲ್ಲ ಅಂದರೆ ಸರಿಯಲ್ಲ.

**ಪಾಟೀ ಸವಾಲು : ಶ್ರೀ ಪಿ ಸಿ ಎಸ್ ವಕೀಲರಿಂದ :**

ಈ ಹಂತದಲ್ಲಿ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೆ.ಸರಿ ಇದೆ.

ಸಹಿ

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.